ಉ) ಪುರಸಭೆ ಜಮಖಂಡಿ ಇವರು ಮೀನು ಮಾರಾಟಕ್ಕಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದ್ದಾರೆ

ಊ) ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶೀಧಲೀಕರಣ ಘಟಕಗಳನ್ನು ಅನುದಾನದ ಲಭ್ಯತೆ ಮೆರೆಗೆ ಆದ್ಯತೆಯನುಗುಣವಾಗಿ ಪರಿಶೀಲಿಸಿ ಪೂರೈಸಲಾಗುವುದು

152 (238) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಯಾವ ಯಾವ ಕಾರ್ಡುಗಳಿಗೆ ಎಷ್ಟೆಷ್ಟು ಸೀಮೆಎಣ್ಣೆಯನ್ನು ಪೂರೈಸಲಾಗುವುದು ,

ಆ) ಸೀಮೆಎಣ್ಣೆ ಪೂರೈಸಲಾದ ಕಾರ್ಡುಗಳ ಸಂಖ್ಯೆಗಳೆಷ್ಟು , ಅನಿಲಯುಕ್ತ ಕಾರ್ಡುಗಳಿಗೆ ಎಣ್ಣೆಯನ್ನು ಪೂರೈಸದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ಹಾಗಿದ್ದಲ್ಲಿ, ವಿದ್ಯುತ್ ಇಲ್ಲದಿದ್ದಾಗ ದೀಪ ಬೆಳಗಿಸಲಾದರೂ ಸೀಮೆಎಣ್ಣೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ,

ಈ) ಇಲ್ಲವಾದ್ದಲ್ಲಿ, ಮುಕ್ತ ಮಾರುಕಟ್ಟೆಯಲ್ಲಾದರೂ ಸೀಮೆಎಣ್ಣೆ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ,

ಉ) ಬಡವರಿಗಾಗಿ ಬಂದ ಹೆಚ್ಚಿನ ಸೀಮೆಎಣ್ಣೆ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಅನಿಲ ರಹಿತ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿದಾರರಿಗೆ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಮಾಹೆಯಾನ 7 ಲೀಟರ್, ಪಟ್ಟಣ ಪ್ರದೇಶದಲ್ಲಿ–5 ಲೀಟರ್ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 4 ಲೀಟರ್‌ನಂತೆ ಪೈರೈಸಲಾಗುತ್ತಿದೆ

ಆ) ಅನಿಲ ರಹಿತ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರುಗಳಿಗೆ ಸೀಮೆಎಣ್ಣೆಯನ್ನು ಪೂರೈಸಲಾಗುತ್ತಿದೆ ಪ್ರದೇಶವಾರು ಕಾರ್ಡುಗಳ ಸಂಖ್ಯೆ ಈ ಕೆಳಕಂಡಂತಿದೆ

ಅನೌಪಚಾರಿಕ ಪಡಿತರ ಪ್ರದೇಶ	19,06,015
ಪಟ್ಟಣ ಪ್ರದೇಶ	8,76,730
ಗ್ರಾಮಾಂತರ ಪ್ರದೇಶ	77,56,802
ಒಟ್ಟು	1,05,39,547

ಹೌದು

ಇ) ಇಲ್ಲ

ಈ) ಮುಕ್ತ ಮಾರುಕಟ್ಟೆಯಲ್ಲಿ ಸೀಮೆಎಣ್ಣೆ ಖರೀದಿಸಲು ಯಾವುದೇ ನಿರ್ಬಂಧವಿರುವುದಿಲ್ಲ

ಉ) ಇಲ್ಲ

ಊ) ಪಡಿತರ -ಸೀಮೆಎಣ್ಣೆಯು ಕಾಳಸಂತೆಯಲ್ಲಿ ಮಾರಾಟವಾದ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಕಾಯ್ದೆ `1955 ರನ್ವಯ ಕ್ರಮ ಜರುಗಿಸಲಾಗುತ್ತದೆ

153 (239) ಶ್ರೀ ಸಿಂಧೂರ ಜಿ ರಾಜಶೇಖರ್ (ಶಿಗ್ಗಾಂವ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕರ್ನಾಟಕ ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲಿ, ದೊಡ್ಡ ವಾಣಿಜ್ಯ ಮಳಿಗೆಗಳಲ್ಲಿ ಹಾಗೂ ವ್ಯಾಪಾರಸ್ಥರು ಗ್ರಾಹಕರಿಗೆ ವಸ್ತುಗಳನ್ನು ಕೊಡುವಾಗ ರಸೀತಿಯನ್ನು (ಕ್ಯಾಶ್ ಬಿಲ್) ಥರ್ಮಲ್ ಪೇಪರಗಳಲ್ಲಿ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಥರ್ಮಲ್ ಪೇಪರ್‌ನಲ್ಲಿ ರಸೀತಿ ಕೊಡುವುದರಿಂದ ಅದರ ಮೇಲೆ ಮುದ್ರಣ (ಪ್ರಿಂಟ್) ಆಗಿರುವ ಅಕ್ಷರಗಳು ಸುಮಾರು 3 ರಿಂದ 4 ತಿಂಗಳುಗಳಲ್ಲಿ ಅಳಿಸಿ ಹೋಗಿ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ವ್ಯಾಪಾರಸ್ಥರು ರಸೀತಿಯನ್ನು ಕೊಡುವಾಗ ಸಣ್ಣ ಪೇಪರನಲ್ಲಿ ನೀಡುವುದರಿಂದ ಅವುಗಳನ್ನು ಕಾಯ್ದಿರಿಸಲಿಕ್ಕೆ ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯಾದ್ಯಂತ ಥರ್ಮಲ್ ಪೇಪರನಲ್ಲಿ ರಸೀತಿ ಕೊಡುವ ಬದಲಾಗಿ ಸಆದಾ ಪೇಪರಿನಲ್ಲಿ ಅಲ್ಲದೆ, ದೊಡ್ಡ ಪೇಪರಗಳಲ್ಲಿ ರಸೀತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? `